**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 51/2023**

ಪಿ.ಡಬ್ಲುಃ2 ಸಿಡಬ್ಲುಃ 2

ಸಾಕ್ಷಿಯ ಹೆಸರು : ನವೀನ್ ತಾಜ್

ಗಂಡನ ಹೆಸರು : ಜಾಫರ್ ಸಾಬ್

ವಯಸ್ಸು : 28 ವರ್ಷ

ವೃತ್ತಿ : ಗೃಹಿಣಿ

ವಾಸಸ್ಥಳ : ಚಿನ್ನಾಪುರ ಗ್ರಾಮ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 11-09-2023

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ಮೃತ ಜಾಫರ್ ಸಾಬ್ ನನ್ನ ಗಂಡ. ಚಾಸಾ-1 ನನ್ನ ನಾದಿನಿ. ಚಾಸಾ-3 ನನ್ನ ಮೈದುನಾ. ಚಾಸಾ-4 ನನ್ನ ಗಂಡನ ಅಕ್ಕನ ಮಗ. ಚಾಸಾ-5 ನನ್ನ ಮೈದುನ ಚಾಸಾ-3 ರವರ ಹೆಂಡತಿ. ಚಾಸಾ-6 ನನ್ನ ತಾಯಿ. ಚಾಸಾ-7 ಮತ್ತು 8 ರವರು ನನ್ನ ತಮ್ಮಂದಿರರು. ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಆರೋಪಿಯೂ ನನ್ನ ಗಂಡನೊಂದಿಗೆ ಅನೈತಿಕ ಸಂಬಂದ ಹೊಂದಿದ್ದಳು. ನಮ್ಮ ಮದುವೆ ದಿಃ25-11-2010 ರಂದು ಆಗಿರುತ್ತದೆ. ನನ್ನ ತವರು ಮನೆ ಕಂಪ್ಲಿ ತಾಲೂಕಿನ ಎಮ್ಮಿಗನೂರು ಗ್ರಾಮ . ನನ್ನ ಗಂಡನ ಮನೆ ಕಂಪ್ಲಿ ತಾಲೂಕಿನ ಚಿನ್ನಾಪುರ ಗ್ರಾಮ. ನನ್ನ ಗಂಡ ಡಿ ಆರ್ ಪೊಲೀಸ್ ಕಾನ್ಸ್ ಟೇಬಲ್ ಆಗಿದ್ದನು. ಆತನು 2008 ರಿಂದ ಸದರಿ ಕೆಲಸ ಮಾಡುತ್ತಿದ್ದನು. ನಾನು ಮದುವೆಯಾದ ನಂತರ ಚಿನ್ನಾಪುರ ಗ್ರಾಮದಲ್ಲಿ ಗಂಡನ ಮನೆಯಲ್ಲಿ ವಾಸವಾಗಿದ್ದೆನು.

ನನ್ನ ಗಂಡ ಬಳ್ಳಾರಿಯಲ್ಲಿ ಕೆಲಸ ಮಾಡುತ್ತಿದ್ದು , ನಮ್ಮ ಊರಿಗೆ ಹೋಗಿ ಬಂದು ಮಾಡುತ್ತಿದ್ದನು. ನನಗೆ 2012 ರಲ್ಲಿ ಮಗಳು ಹುಟ್ಟಿದ್ದಳು, ಅವಳ ಹೆಸರು ತಸ್ಮಿಯಾ. ನನ್ನ ಗಂಡ ಬಳ್ಳಾರಿಯ ಹವಂಬಾವಿಯ ಶಿಲ್ಪಿ ನಗರದಲ್ಲಿ ಬಾಡಿಗೆ ಮನೆಯಲ್ಲಿ ನಮ್ಮನ್ನು

ತಂದು ಇಟ್ಟಿದ್ದನು. ನಾನು 2 ನೇ ಮಗುವಿಗೆ ಗರ್ಭ ಧರಿಸಿದಾಗ ಬಾಲಾಜಿ ನರ್ಸಿಂಗ್ ಹೋಮಿಗೆ ಚಿಕಿತ್ಸೆಗೆ ಬರುತ್ತಿದ್ದೆನು. ಸದರಿ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿ ಆರೋಪಿಯೂ ಕೆಲಸ ಮಾಡುತ್ತಿದ್ದಳು. ನನ್ನ ಗಂಡ ಅವಳನ್ನು ನನಗೆ ಪರಿಚಯ ಮಾಡಿಸಿ ಕೊಟ್ಟರು. ಆಗಾಗ ಆಸ್ಪತ್ರೆಗೆ ಹೋಗಿ ಬರುತ್ತಿರುವುದರಿಂದ ನನಗೆ ಮತ್ತು ನನ್ನ ಗಂಡನಿಗೆ ಅವಳ ಪರಿಚಯ ಹೆಚ್ಚಾಯಿತು. ಆರೋಪಿತಳನ್ನು ನನ್ನ ಗಂಡ ಎರಡು ಬಾರಿ ನಮ್ಮ ಮನೆಗೆ ಕರೆದುಕೊಂಡು ಬಂದಿದ್ದನು. ಆರೋಪಿ ಮತ್ತು ನನ್ನ ಗಂಡ ಬಹಳ ಆತ್ಮಿಯತೆಯಿಂದ ಇರುತ್ತಿದ್ದರು ಆ ಕಾರಣ ಅನೈತಿಕ ಸಂಬಂದ ಇಬ್ಬರ ಮಧ್ಯದಲ್ಲಿ ಇದೆ ಎಂದು ಖಚಿತವಾಗಿತ್ತು. ಆ ಕಾರಣಕ್ಕಾಗಿ ನನಗೆ ಮತ್ತು ನನ್ನ ಗಂಡನ ಮಧ್ಯದಲ್ಲಿ ಜಗಳವಾಗುತ್ತಿತ್ತು. ನಂತರ ನನ್ನ ಗಂಡ ಜಗಳ ಮಾಡುವ ಕಾರಣ ಆತನ ವಿರುದ್ಧ ಜೀವನಾಂಶ ಪ್ರಕರಣ ದಾಖಲಿಸಿರುತ್ತೇನೆ. ಸದರಿ ಜಗಳವಾದ ಕಾರಣ ನಾನು ನನ್ನ ತವರು ಮನೆಗೆ ಹೋಗಿದ್ದೆನು. ಸದರಿ ಕೇಸ್ ದಾಖಲಿಸುವ ಮೊದಲು ನನ್ನ ಗಂಡನನ್ನು ಕರೆಯಲು ಕಳುಹಿಸಿ ಚೆನ್ನಾಗಿ ಜೀವನ ಮಾಡೋಣ ಎಂದು ನಾನು ಕೇಳಿದರೂ ಸಹ ಆತನು ಬರಲಿಲ್ಲ. ಸದರಿ ಪ್ರಕರಣ ನನಗೆ 2 ನೇ ಹೆರಿಗೆಯಾದ ನಂತರ ಮರಳಿ ಕರೆದುಕೊಂಡು ಹೋಗುತ್ತೇನೆ ಎಂದು ಕೇಸ್ ರಾಜೀ ಮಾಡಿಸಿಕೊಂಡನು .

ನನಗೆ ಎರಡನೆಯದು ಗಂಡು ಮಗುವಾಗಿರುತ್ತದೆ. ಆತನು ಹೆಸರು ಸಾಹಿಲ್ ಇರುತ್ತದೆ. ನನ್ನ ಗಂಡ ಸದರಿ ನನ್ನ ಮಗುವನ್ನು ನೋಡಲು ಬಂದಿರುವುದಿಲ್ಲ. ನನ್ನನ್ನು ಕರೆದುಕೊಂಡು ಹೋಗಲು ಬರುವಂತೆ ಹೇಳಿದರೂ ಸಹ ಆತನು ಬಂದಿರುವುದಿಲ್ಲ. ತನಗೆ ಹೆಂಡತಿ ಬೇಕು ಎಂದು ನನ್ನ ಗಂಡ ಕೇಸ್ ದಾಖಲಿಸಿರುತ್ತಾರೆ. ಸದರಿ ನ್ಯಾಯಾಲಯದಲ್ಲಿ ನಾನು ಚಿನ್ನಾಪುರದ ಗಂಡನ ಮನೆಯಲ್ಲಿ ವಾಸ ಇರಬೇಕು ಎಂದು ಕ್ವಾರ್ಟರ್ಸ್ ನಲ್ಲಿ ಇರುವುದು ಬೇಡ ಎಂದು ಆದೇಶವಾಗಿರುತ್ತದೆ. ಸದರಿ ಆದೇಶದ ಮೇರೆಗೆ ನಾನು ಚಿನ್ನಾಪುರ ಗ್ರಾಮದಲ್ಲಿ ನಮ್ಮ ಅತ್ತೆ, ಮಾವ, ನಾದಿನಿ ಮತ್ತು ಮೈದುನರ ಜೊತೆ

ವಾಸವಾಗಿದ್ದೆನು. ಆಗ ನನ್ನ ಗಂಡ ಬಳ್ಳಾರಿಯ ಡಿ ಆರ್ ಕ್ವಾರ್ಟರ್ಸ್ ನಲ್ಲಿ ವಾಸವಾಗಿದ್ದನು. ಸದರಿ ಡಿ ಆರ್ ಕ್ವಾರ್ಟರ್ಸ್ ನಲ್ಲಿ ಆರೋಪಿಯೂ ಆತನೊಂದಿಗೆ ವಾಸವಾಗಿದ್ದಳು. ನಂತರ ನಾನು ಜೀವನಾಂಶಕ್ಕೆ ಕೋರಿ ಪ್ರಕರಣ ದಾಖಲಿಸಿರುತ್ತೇನೆ. ಸದರಿ ಪ್ರಕರಣದಲ್ಲಿ ನನಗೆ ತಿಂಗಳಿಗೆ **6,000** ರೂ ಕೊಡಬೇಕೆಂದು ಆದೇಶವಾಗಿರುತ್ತದೆ. ನಾನು ವರದಕ್ಷಿಣೆ ಕಿರುಕುಳ ಕೊಡುತ್ತಾರೆ ಎಂದು ನನ್ನ ಗಂಡ ಜಾಫರ್ ಸಾಬ್, ನನ್ನ ಅತ್ತೆ , ಚಾಸಾ-**1** ಹಾಗೂ ಚಾಸಾ-**3** ರವರ ಮೇಲೆ ಕಂಪ್ಲಿ ಪೊ. ಠಾಣೆಯಲ್ಲಿ ಕೇಸ್ ದಾಖಲಿಸಿರುತ್ತೇನೆ. ನಂತರ **2022** ರಲ್ಲಿ ಜೀವನಾಂಶ ಹೆಚ್ಚಿಗೆ ಕೇಳಿ ಅರ್ಜಿ ಸಲ್ಲಿಸಿರುತ್ತೇನೆ . ಸದರಿ ಅರ್ಜಿಯ ಮೇಲೆ ಹೆಚ್ಚಿನ ಜೀವನಾಂಶ **15,000** ರೂ . ಕೊಡಬೇಕೆಂದು ಆದೇಶವಾಗಿರುತ್ತದೆ.

**2023** ಜನವರಿ ತಿಂಗಳಿನಿಂದ ನನ್ನ ಗಂಡ ಚಿನ್ನಾಪುರ ಗ್ರಾಮಕ್ಕೆ ಬಂದು ಹೋಗುವುದನ್ನು ಮಾಡುತ್ತಿದ್ದನು. ಬಳ್ಳಾರಿಯ ಡಿ ಆರ್ ಕ್ವಾರ್ಟರ್ಸ್ ಜಿ ಬ್ಲಾಕ್ ನಂ. **11** ರಲ್ಲಿ ಆತನ ಕೊಲೆಯಾಗಿರುತ್ತದೆ. ಸದರಿ ನನ್ನ ಗಂಡನ ಕೊಲೆಯೂ ದಿಃ **22-03-2023** ರಂದು ಆಗಿರುತ್ತದೆ. ಸದರಿ ಕೊಲೆಯಾಗಿದ್ದನ್ನು ರಾಃ **10-30** ಕ್ಕೆ ನನ್ನ ಗಂಡನ ಅಕ್ಕನ ಮಗ ಮೊಹಮ್ಮದ್ ಇವರು ಫೋನ್ ಮಾಡಿ ತಿಳಿಸಿದರು. ನಂತರ ನಾನು ಮತ್ತು ನನ್ನ ತಾಯಿ ಕಂಪ್ಲಿ ಪೊ. ಠಾಣೆಗೆ ಹೋದೆವು. ಆಗ ಕಂಪ್ಲಿ ಪೊಲೀಸರು ಆತನ ಕೊಲೆ ಬಳ್ಳಾರಿಯಲ್ಲಿ ಆಗಿದ್ದರಿಂದ ಅಲ್ಲೆ ದೂರು ದಾಖಲಿಸಬೇಕೆಂದು ಹೇಳಿರುತ್ತಾರೆ. ರಾತ್ರಿಯಾಗಿದ್ದರಿಂದ ನಾವಿಬ್ಬರು ಹೆಣ್ಣು ಮಕ್ಕಳು ಇರುವ ಕಾರಣ ರಾತ್ರಿ ಬಳ್ಳಾರಿಗೆ ಬಂದಿರುವುದಿಲ್ಲ.

ದಿಃ **23-03-2023** ರಂದು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಹೋಗಿರುತ್ತೇವೆ. ಸದರಿ ಆಸ್ಪತ್ರೆಯಲ್ಲಿ ಬೆಳಗ್ಗೆಃ **8-00** ಗಂಟೆಗೆ ನನ್ನ ಗಂಡನ ಶವ ತೋರಿಸುತ್ತೇನೆ ಎಂದು ಹೇಳಿದ್ದರಿಂದ ನಾವು ಗಾಂಧಿನಗರ ಪೊ. ಠಾಣೆಗೆ ಬಂದಿರುತ್ತೇವೆ. ಸದರಿ ಠಾಣೆಯಲ್ಲಿ ನನ್ನ ಗಂಡನ ಅಕ್ಕ ಚಾಸಾ-**1** ರವರು ದೂರು ಕೊಟ್ಟಿರುತ್ತಾರೆ ಎಂದು ಪೊಲೀಸರಿಂದ ನನಗೆ ತಿಳಿಯಿತು.

ಸದರಿ ಹನುಮಕ್ಕಳು ನನ್ನ ಗಂಡನ ಕೊಲೆ ಮಾಡಿರುತ್ತಾಳೆ ಎಂದು ಚಾಸಾ-1 ರವರು ನನಗೆ ತಿಳಿಸಿದರು.

ನನ್ನ ಗಂಡ 5 ವರ್ಷಗಳಿಂದ ಸದರಿ ಕ್ವಾರ್ಟರ್ಸ್ ನಲ್ಲಿ ಆರೋಪಿಯೊಂದಿಗೆ ವಾಸವಾಗಿದ್ದನು. ಸದರಿ ಪೊ. ಠಾಣೆಯಿಂದ ನಾವು ವಿಮ್ಸ್ ಆಸ್ಪತ್ರೆಗೆ ಮರಳಿ ಬಂದಿರುತ್ತೇವೆ. ಸದರಿ ನನ್ನ ಗಂಡನಿಗೆ ಬಲಕಿವಿ , ಕಿವಿಯ ಹಿಂದುಗಡೆ ಹೊಡೆದ ಗಾಯಗಳಾಗಿದ್ದವು. ಪೊಲೀಸರು ಶವ ತನಿಖೆಯನ್ನು ಮಾಡಿ ಪಂಚನಾಮೆ ಮಾಡಿರುತ್ತಾರೆ. ನನ್ನ ಗಂಡ ಆತ ಜೀವಂತ ಇರುವಾಗ ಉಗಾದಿ ಹಬ್ಬದ ದಿನ ಮಗನಿಗೆ ಸೈಕಲ್ ಮತ್ತು ಮಗಳಿಗೆ ಗೊಂಬೆಯನ್ನು ತೆಗೆದುಕೊಂಡು ಚೆನ್ನಾಪುರ ಗ್ರಾಮಕ್ಕೆ ಮಃ 12-00 ಗಂಟೆಗೆ ಬಂದಿರುತ್ತಾರೆ. ಅದೇ ದಿನ ಸಾಃ 5-30 ಕ್ಕೆ ಮರಳಿ ಬಳ್ಳಾರಿಗೆ ಹೋಗಿರುತ್ತಾರೆ. ನನ್ನ ಗಂಡನ ಕೊಲೆಯ ವಿಷಯವಾಗಿ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ಸದರಿ ಹೇಳಿಕೆಯನ್ನು ಶವ ತನಿಖಾ ಮಾಡುವ ಕಾಲಕ್ಕೆ ಮತ್ತು ಪೊ. ಠಾಣೆಯಲ್ಲಿ ಕೊಟ್ಟಿರುತ್ತೇನೆ. ಸದರಿ ಶವ ತನಿಖಾ ಕಾಲದಲ್ಲಿ ನನ್ನ ಗಂಡ ಬಿಳಿ ಬಣ್ಣದ ಬನಿಯನ್ ಮತ್ತು ಚೆಕ್ಸ್ ಲುಂಗಿಯನ್ನು ಧರಿಸಿದ್ದರು. ಸಾಕ್ಷಿಗೆ ಮ.ಮಾ-1 ಮತ್ತು 2 ನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯೂ ತನ್ನ ಹೆಂಡತಿ ಮಕ್ಕಳೊಂದಿಗೆ ಮಾತನಾಡಬಾರದು ಅವರ ಬಳಿ ಹೋಗಬಾರದು ಎಂದು ಜಗಳ ಮಾಡುತ್ತಿದ್ದರು. ಸದರಿ ಜಗಳ ಮಾಡುತ್ತಿದ್ದ ಬಗ್ಗೆ ಮೃತ ನನ್ನ ಗಂಡ ನನಗೆ ತಿಳಿಸುತ್ತಿದ್ದರು. ಸದರಿ ಜಗಳ ಮಾಡುತ್ತಿದ್ದದ್ದನ್ನು ಅಕ್ಕ ಪಕ್ಕದ ಜನ ನೋಡುತ್ತಿದ್ದರು ಎಂದು ನನ್ನ ಗಂಡ ನನಗೆ ಹೇಳುತ್ತಿದ್ದನು. ಸಾಕ್ಷಿಯೂ ನ್ಯಾಯಾಲಯದಲ್ಲಿ ಹಾಜರುಪಡಿಸಿದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ಹೆಚ್ ಎ ಆರ್ ವಕೀಲರಿಂದಃ</u>

ಮೃತ ನನ್ನ ಗಂಡ ನನ್ನ 2 ನೇ ಮಗುವಿನ ಜನನವಾದ ನಂತರ ನಮ್ಮನ್ನು ನ್ಯಾಯಾಲಯದಲ್ಲಿ ತನ್ನ ಮನೆಗೆ ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿರುತ್ತಾನೆ ಎನ್ನುವ ಅಂಶವನ್ನು ಮೊದಲ ಬಾರಿಗೆ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ಗಂಡ ಮಗುವನ್ನು ನೋಡಲು ಬಂದಿಲ್ಲ , ನನ್ನನ್ನು ಕರೆದುಕೊಂಡು ಹೋಗಲು ಬಂದಿರುವುದಿಲ್ಲ ಎನ್ನುವ ಅಂಶವನ್ನು ಮೊದಲ ಬಾರಿಗೆ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಬಳ್ಳಾರಿಯ ಕೌಟುಂಬಿಕ ನ್ಯಾಯಾಲಯದಲ್ಲಿ ನನ್ನ ಗಂಡ ಹೆಂಡತಿ ಬೇಕು ಎಂದು ಕೇಸು ಹಾಕಿ ಸದರಿ ನ್ಯಾಯಾಲಯದಲ್ಲಿ ನನ್ನ ಹಾಗೂ ಮಕ್ಕಳೊಂದಿಗೆ ಬಳ್ಳಾರಿಯ ಕ್ವಾರ್ಟರ್ಸ್ ನಲ್ಲಿ ಇರಬೇಕೆಂದು ಆದೇಶವಾಗಿರುತ್ತದೆ ಎನ್ನುವ ಅಂಶವನ್ನು ಮೊದಲ ಬಾರಿಗೆ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸದರಿ ಆದೇಶದ ಪ್ರತಿಯನ್ನು ನಾನು ತನಿಖಾಧಿಕಾರಿರವರಿಗೆ ಕೊಟ್ಟಿರುವುದಿಲ್ಲ. ಜನವರಿ ತಿಂಗಳಿನಿಂದ ನನ್ನ ಗಂಡ ಮನೆಗೆ ಬರುತ್ತಿದ್ದ ಎನ್ನುವ ಅಂಶವನ್ನು ಮೊದಲ ಬಾರಿಗೆ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ಗಂಡನ ಕೊಲೆಯಾದ ದಿನ ರಾಃ **10-30** ಕ್ಕೆ ಮೊಹಮ್ಮದ್ ನು ನನಗೆ ವಿಷಯ ತಿಳಿಸಿದ ಎನ್ನುವ ಅಂಶವನ್ನು ಮೊದಲ ಬಾರಿಗೆ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನನಗೆ ವಿಷಯ ತಿಳಿಯಿತು ಹೆಣ್ಣು ಮಕ್ಕಳು ಆಗಿದ್ದರಿಂದ ರಾತ್ರಿ ನಮಗೆ ಬಳ್ಳಾರಿಗೆ ಬರಲು ಆಗಿರುವುದಿಲ್ಲ ಎನ್ನುವ ಅಂಶವನ್ನು ಮೊದಲ ಬಾರಿಗೆ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ನನ್ನ ತಾಯಿ ಬೆಂಗಳೂರಿನ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನಾನು ಸಹ ನನ್ನ ತಾಯಿ ಜೊತೆಗೆ ಬೆಂಗಳೂರಿನಲ್ಲಿ ಇದ್ದೆನು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಬಳ್ಳಾರಿಯ ಡಿ ಆರ್ ಕ್ವಾರ್ಟರ್ಸ್ ನಂ. **11** ರಲ್ಲಿ ನಾನು ಯಾವತ್ತು ಬಂದು ವಾಸ ಮಾಡಿಲ್ಲ ಎಂದರೆ ಸರಿ . ನನ್ನ ಗಂಡ ಮತ್ತು ಅವರ ಮನೆಯವರ ಮೇಲೆ ಹಾಕಿದ ಪ್ರಕರಣಗಳು ಇವತ್ತಿಗೆ ವಿಚಾರಣೆಯಲ್ಲಿ ಇರುತ್ತವೆ, ಅವುಗಳನ್ನು ಮರಳಿ ಹಿಂತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ . ಸದರಿ ಎಲ್ಲಾ ಪ್ರಕರಣಗಳನ್ನು ನನ್ನ ಗಂಡ

ಮರಣ ಹೊಂದಿದ ನಂತರ ಹಿಂದೆ ತೆಗೆದುಕೊಂಡಿರುತ್ತೇನೆ . ನನ್ನ ಗಂಡನ ಎಸ್ ಆರ್ ರಿಕಾರ್ಡ್ ನಲ್ಲಿ ನನ್ನ ಹೆಸರು ಇರುತ್ತದೆ. ಎಸ್ ಪಿ ಕಚೇರಿಯಿಂದ ನನಗೆ ಪತ್ರ ಬಂದಿರುತ್ತದೆ. ಹನುಮಕ್ಕನಿಗೆ ಎಸ್ ಪಿ ಕಚೇರಿಯಿಂದ ದಿಃ**03-09-2023** ರಂದು ನೋಟಿಸ್ ಹೋಗಿರುತ್ತದೆ ಎಂದರೆ ಸರಿಯಲ್ಲ. ನಾವು ಮತ್ತು ನಮ್ಮ ಕುಟುಂಬದವರು ಎಲ್ಲಾ ಸೇರಿ ಆರೋಪಿಯ ತಂದೆಯೊಂದಿಗೆ ಅನುಕುಂಪದ ನೌಕರಿಯನ್ನು ನಮಗೆ ಬಿಟ್ಟು ಕೊಡುವಂತೆ ಕೇಳಿರುತ್ತೇವೆ ಎಂದರೆ ಸರಿಯಲ್ಲ . ಆರೋಪಿ ಜೈಲ್ ನಲ್ಲಿ ಇರುವುದರಿಂದ ಈ ವಿಷಯದ ಬಗ್ಗೆ ನಾನೇನು ಹೇಳಲು ಆಗುವುದಿಲ್ಲ ಎಂದು ಆರೋಪಿ ತಂದೆ ನಮಗೆ ತಿಳಿಸಿದನು ಎಂದರೆ ಸರಿಯಲ್ಲ. ಮೃತನ ಅನುಕಂಪದ ಆಧಾರದ ಸೌಲಭ್ಯಗಳನ್ನು ನಾವು ಪಡೆಯಬೇಕು ಎಂದು ಆರೋಪಿ ತಂದೆಯನ್ನು ಬೆದರಿಸಿದ್ದೇವೆ ಎಂದರೆ ಸರಿಯಲ್ಲ . ಸದರಿ ನೌಕರಿಯನ್ನು ಬಿಟ್ಟು ಕೊಡದಿದ್ದರೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತೇವೆ ಎಂದು ಆರೋಪಿಯನ್ನು ಬೆದರಿಕೆ ಹಾಕಿರುತ್ತೇವೆ ಎಂದರೆ ಸರಿಯಲ್ಲ .

ಮೃತನು ಆರೋಪಿಯೊಂದಿಗೆ ಪ್ರೀತಿಸಿ ಮದುವೆಯಾಗಿರುತ್ತಾನೆ ಎಂದರೆ ಅದು ಮದುವೆಯ ಅಲ್ಲ ಅನೈತಿಕ ಸಂಬಂದ. ಆರೋಪಿಯೂ ನನ್ನ ಗಂಡ ಜಾಫರ್ ನನ್ನು ತನ್ನ ಸ್ವಂತ ಗಂಡನನ್ನಾಗಿ ಇಟ್ಟುಕೊಳ್ಳಬೇಕೆಂದು ನನ್ನನ್ನು ಹೊಡೆ ಬಡೆ ಮಾಡಿಲ್ಲ ಎಂದರೆ ಸರಿ . ನನ್ನ ಗಂಡನ ಮೇಲೆ ನನಗೆ ಪ್ರೀತಿ ವಿಶ್ವಾಸ ಇರಲಿಲ್ಲ ಎಂದರೆ ಸರಿಯಲ್ಲ. ನಾನೇ ನನ್ನ ಗಂಡನನ್ನು ಬಿಟ್ಟು ಬೇರೆ ಜೀವನ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ತಾಯಿ ಊರು ಎಮ್ಮಿಗನೂರಿನಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ . ಆರೋಪಿ ಮನೆಯಲ್ಲಿ ಇಲ್ಲದ ಸಮಯದಲ್ಲಿ ಯಾರೋ ದುಷ್ಕರ್ಮಿಗಳು ಜಾಫರ್ ಸಾಬ್ ನನ್ನು ಹೊಡೆದು ಹೋದ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಯಾರೋ ಹೊಡೆದು ಹೋದ ಜಾಫರ್ ನ ಕೊಲೆಗೆ ಸಂಬಂದಿಸಿದಂತೆ ಹನುಮಕ್ಕಳ ಯಾವುದೇ ತಪ್ಪು ಇಲ್ಲದೆ ಇದ್ದರೂ ಸಹಿತ ಈ ಪ್ರಕರಣದಲ್ಲಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ .

ನನ್ನ ಗಂಡ ನನ್ನ ಮಗನಿಗೆ ಸೈಕಲ್ ಮತ್ತು ಮಗಳಿಗೆ ಗೊಂಬೆಯನ್ನು ತಂದಿದ್ದನ್ನು ನಾನು ಪೊಲೀಸರಿಗೆ ತೋರಿಸಿರುತ್ತೇನೆ. ನನ್ನ ಗಂಡ ಆರೋಪಿಯೂ ನನಗೆ ಬೇಟಿಯಾಗುವುದನ್ನು ಸಹಿಸುತ್ತಿರಲಿಲ್ಲ ಜಗಳ ಮಾಡುತ್ತಾಳೆ ಎಂದು ನನ್ನ ಮುಂದೆ ಹೇಳಿರಲಿಲ್ಲ ಎಂದರೆ ಸರಿಯಲ್ಲ . ನನ್ನ ಗಂಡ ಹನುಮಕ್ಕಳ ವಿರುದ್ದ ಜಗಳದ ಬಗ್ಗೆ ಹೇಳಿದ ನಂತರ ನಾನು ಆರೋಪಿ ನನ್ನ ಮತ್ತು ನನ್ನ ಗಂಡನ ಜೀವನದಲ್ಲಿ ತೊಂದರೆ ಕೊಡುತ್ತಿದ್ದಾಳೆ ಎಂದು ಯಾವುದೇ ದೂರನ್ನು ದಾಖಲಿಸಿರುವುದಿಲ್ಲ.

ನಾನು ನನ್ನ ಗಂಡನಿಂದ 8 ವರ್ಷ ದೂರ ಇರುವ ಸಮಯದಲ್ಲಿ ಮೃತನು ಆರೋಪಿಯನ್ನು ಮದುವೆಯಾಗಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಮದುವೆಯನ್ನು ನನ್ನ ಅತ್ತೆ, ಚಾಸಾ-3 ರವರು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.